ಲಭ್ಯತೆ ಇಲ್ಲ ಎಂಬ ಪ್ರಶ್ನೆ ಇಲ್ಲ. ಅವರು ಇನ್ನೊಂದು ವಿಚಾರ ಏನು ಹೇಳಿದರು ಅಂದರೆ ಕಪ್ಪುಭೂಮಿಯಲ್ಲಿ ಕಟ್ಟುವ ಮನೆಗಳಿಗೆ ಹಣ ಏನಾದರೂ ಹೆಚ್ಚಿಸುತ್ತೀರಾ ಎಂದು. ಅದಕ್ಕೆ ನಾವು ಏನು ಮಾಡಿದ್ದೇವೆ ಅಂದರೆ ನಗರ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಹಣ ಹೆಚ್ಚಾಗುತ್ತದೆ ಎಂಬ ಉದ್ದೇಶಕ್ಕಾಗಿ ಪ್ರತಿಯೊಬ್ಬ ಫಲಾನುಭವಿಯಿಂದ 5 ಸಾವಿರ ರೂ.ಗಳನ್ನು ಸಂಗ್ರಹಿಸುವುದರ ಜೊತೆಗೆ ನೆಲಪಾಯವನ್ನು ಬಿಗಿಯಾಗಿ ಹಾಕಿ ಮನೆಗಳನ್ನು ಕಟ್ಟುವ ವ್ಯವಸ್ಥೆಯಲ್ಲಿ ಮುಂದಾಗಿದ್ದೇವೆ. ಈಗಿರುವ ದರವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇಲ್ಲ.

ಅಧ್ಯಕ್ಷರು : ಆಯಿತು. ಇಲ್ಲಿಗೆ ಪ್ರಶ್ನೋತ್ತರ ಮುಗಿದಿದೆ. ಈಗ ತಡೆಹಿಡಿಯಲಾದ ಪ್ರಶ್ನೆಗಳು. ಶಿವಾನಂದ ಪಾಟೀಲರೇ, ತಡೆಹಿಡಿಯಲಾದ ಪ್ರಶ್ನೆಗಳ ಪೈಕಿ ತಮ್ಮ ಪ್ರಶ್ನೆ 4100 ಏನಿದೆ ಇದಕ್ಕೆ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಮುಂದಿನ ವಾರಕ್ಕೆ ಮುಂದೂಡಲು ಹೇಳಿದ್ದಾರೆ. ಅಂದರೆ next week ಬರುತ್ತದೆ ಎಂದು commit ಆಗಿಹೋಯಿತು.

ಶ್ರೀ ಶಿವಾನಂದ ಎಸ್ ಪಾಟೀಲ್ : ಆಯಿತು, ಒಂದು request ನಿಮ್ಮಲ್ಲಿ, last session ನಲ್ಲಿ ನನ್ನ 5 starred questions ನಲ್ಲಿ 4ಕ್ಕೆ ಉತ್ತರ ಬರಲಿಲ್ಲ. ಈ ಸಲ ಇಲ್ಲಿಯವರೆಗೆ ನನ್ನ ಮೂರು ಪ್ರಶ್ನೆಗಳೂ ಹಾಗೇ ಇವೆ. ಇದು ಮೂರನೆಯದಕ್ಕೂ ಉತ್ತರ ಬಂದಿಲ್ಲ, ಇವತ್ತು ಬೆಳಿಗ್ಗೆಯೂ ನಾನು ತಮ್ಮಲ್ಲಿ ವಿನಂತಿಸಿಕೊಂಡೆ. ಮಾನ್ಯ ಮುಖ್ಯಮಂತ್ರಿಗಳು ಇದ್ದಾಗ irregation department ಬಗ್ಗೆ ಒಂದು ವಿವರಣೆ ಕೇಳಲು ಅವಕಾಶ ಮಾಡಿಕೊಡಿ ಎಂದು ತಮ್ಮ ವಿವೇಚನೆಗೇ ಇದನ್ನು ಬಿಡುತ್ತೇನೆ, ನಿಮಗೆ ಹೇಗೆ ಬೇಕೋ ಹಾಗೆ ನಡೆಸಿಕೊಂಡು ಹೋಗಿ.

ಅಧ್ಯಕ್ಷರು : ಬೆಳಗಿನ ವಿಚಾರ ಬೇಡಿ question hour ಬಗ್ಗೆ ಮಾತನಾಡಿ. ಆಯಿತು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 30.7.2003ರಂದು ಲಿಖಿತ ಮೂಲಕ ಉತ್ತರಿಸುವ 107 ಪ್ರಶ್ನೆಗಳ ಪೈಕಿ 70 ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. (ಅನುಬಂಧ–I)

ಇ) ದಿನಾಂಕ 25.7.2003 ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. (ಅನುಬಂಧ–II)

ಈ) ದಿನಾಂಕ 28.7.2003 ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. (ಅನುಬಂಧ–III)

ಉ) ದಿನಾಂಕ 29.7.2003 ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. (ಅನುಬಂಧ–IV)

ಅಧ್ಯಕ್ಷರು : ಮಂಡಿಸಲಾಯಿತು.